# ಶೈಕ್ಷಣಿಕ ವಿಚಾರಧಾರೆಗಳು ಹಾಗೂ ಹರಿದಾಸರ ಸಾಹಿತ್ಯ

**ಮಂಜಪ್ಪ ಚಲವಾದಿ**

## ಪ್ರವೇಶ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿದಸಿದರೆ, ಎರಡು ಸರ್ವೋದಯ ಚಳುವಳಿಗಳು ಕಣ್ಣಿಗೆ ಬೀಳುತ್ತವೆ: ಶಿವಶರಣರದು ಹನ್ನೆರಡನೆಯ ಶತಮಾನದಲ್ಲಿ ಘಟಿಸದ್ದು; ಇನ್ನೊಂದು ಹರಿದಾಸರದು. 15–16ನೆಯ ಶತಮಾನದಲ್ಲಿ ಎದ್ದು ಕಾಣುವಂಥದು, ಶಿವಶರಣರ ಈ ವಚನ ವಾಙ್ಮಯಕ್ಕೆ ವೀರಶೈವ ಧರ್ಮ ಹಿನ್ನೆಲೆಯಾದರೆ, ಹರಿದಾಸರ ಕೀರ್ತನ ಸಾಹಿತ್ಯಕ್ಕೆ ಮಧ್ವಾಚಾರ್ಯ ಪ್ರಣೀತ ದ್ವೈತಸಿದ್ಧಾಂತ ಹಿನ್ನೆಲೆಯಾಗಿದೆ. ವಚನಕಾರರೂ ಹರಿದಾಸರೂ ಸಂಸ್ಕೃತದಲ್ಲಿ ನಿಕ್ಷಿಪ್ತವಾಗಿ ಸಾವರಾನ್ಯ ಜನತೆಗೆ ಅಗಮ್ಯವಾಗಿದ್ದ ವಿಷಯಗಳನ್ನು ತಿಳಿಗನ್ನಡ ದಲ್ಲಿ ತಿಳಿಸಿಕೊಟ್ಟರು; ಜನತೆಗೆ ಅರ್ಥವಾಗುವ ಭಾಷೆಯಲ್ಲಿ, ಕೆಲವೊಮ್ಮೆ ಆಡು ನುಡಿಯಲ್ಲಿ ಜ್ಞಾನ ಪ್ರಜ್ಞಾನಗಳನ್ನು ಸಂವಹನಗೊಳಿಸಿ ಉಪಕರಿಸಿದರು; ಗಂಡು ಹೆಣ್ಣು, ಬ್ರಾಹ್ಮಣ–ಶೂದ್ರ, ಅಗ್ರಜ–ಅಂತ್ಯಜ ಎಂಬ ಭೇದವಿಲ್ಲದೆ ಎಲ್ಲರೂ ಉದ್ಧಾರಗೊಳ್ಳಲು ಅನುವು ಮಾಡಿಕೊಟ್ಟರು. ಈ ಸಾಹಿತ್ಯವನ್ನು 'ಸಾಮಾನ್ಯರ ವೇದ' ಎಂದು ಕರೆಯಬಹುದು, 'ವೇದ' ಶಬ್ದಕ್ಕೆ ಜ್ಞಾನವೆಂಬ ವ್ಯಾಪಕವಾದ ಮೂಲಾರ್ಥವಿರುವುನ್ನು ಲಕ್ಷಿಸಬೇಕು. (ಅನಂತಾ ಹಿ ವೈ ವೇದಾಃ" ಎಂಬ ವರಾತನ್ನು ನೆನೆಯಬಹುದು), ಜ್ಞಾನ, ಭಕ್ತಿ, ವೈರಾಗ್ಯಗಳ ಉಪದೇಶ ಪಾಮರರಿಗೆ ಅವರ ಭಾಷೆಯಲ್ಲಿ ಲಭ್ಯವಾಯಿತೆನ್ನುವುದು ಅಪೂರ್ವ ಸಂಗತಿ.

'ಸಾಮಾನ್ಯರ ವೇದ' ಎಂಬ ವರಾತು ಹರಿದಾಸರ ಹಾಡುಗಳಿಗೆ ಹೆಚ್ಚು ಸಮಂಜವಾಗಿ ಒಪ್ಪುತ್ತದೆ, 'ವೇದ' ಶಬ್ದದ ಸಾಮಾನ್ಯಾರ್ಥದಲ್ಲಿ. ದಾಸರ ಮಾಧ್ಯಮ ಕನ್ನಡವಾದರೂ, ಅವರದು ಶುದ್ಧ ವೈದಿಕ ಪರಂಪರೆಯೇ. ವಚನಕಾರರ ಬಗೆಗೆ ಹೀಗೆ ಹೇಳುವುದು ಕಷ್ಟ. ಅವರು ವೇದೋಪನಿಷತ್ತುಗಳನ್ನು ಸಂಪೂರ್ಣ ವಾಗಿ ಅಲ್ಲಗಳೆಯದಿದ್ದರೂ, ವೈದಿಕ ಪರಂಪರೆಯನ್ನು ಕುರಿತು ಅವರದು ಮುಖ್ಯ ವಾಗಿ ಪ್ರತಿಭಟನೆಯ ನಿಲುವು. ವೇದದ ಜ್ಞಾನಕಾಂಡವನ್ನಷ್ಟೆ ವಚನಕಾರರು ಪುರಸ್ಕರಿಸಿದರು; ಕರ್ಮಕಾಂಡವನ್ನು ಖಂಡಿಸಿದರು. ಹರಿದಾಸರೆಲ್ಲ ವೇದದ ಕರ್ಮಕಾಂಡವನ್ನು ತಕ್ಕಮಟ್ಟಿಗೆ ಒಪ್ಪುತ್ತಾರೆ; ವರ್ಣಾಶ್ರಮಧರ್ಮವನ್ನು ವಿರೋಧಿಸುವುದಿಲ್ಲ.

ಹರಿದಾಸರ ಕೀರ್ತನ ವಾಙ್ಮಯ ವೇದೋಪನಿಷತ್ತುಗಳ ತಿರುಳನ್ನು ಕನ್ನಡದಲ್ಲಿ ಪ್ರತಿಪಾದಿಸುತ್ತದೆ; ಅಲ್ಲಿನ ಗಹನ ತತ್ವಗಳನ್ನು, ಅಧ್ಯಾತ್ಮರಹಸ್ಯಗಳನ್ನು ಸರಳ ಸುಲಭ ರೀತಿಯಲ್ಲಿ ಜನಸಾಮಾನ್ಯರಿಗೆ ಅನಾವರಣಗೊಳಿಸುತ್ತದೆ. ದಾಸ ಶ್ರೇಷ್ಠರೆನಿಸಿದ ಪುರಂದರದಾಸರ ಕೀರ್ತನೆಗಳಿಗೆ 'ಪುರಂದರೋಪನಿಷತ್' ಎಂಬ ಅಭಿಧಾನ ಸಂದಿರುವುದನ್ನು ಗಮನಿಸಬಹುದು. ಇದು ಸಮಗ್ರ ದಾಸಸಾಹಿತ್ಯಕ್ಕೇ ಅನ್ವಯಸುತ್ತದೆ. "ಕಲ್ಲು ಸಕ್ಕರೆ ಕೊಳ್ಳಿರೋ' ಎಂದು ದಾಸರು ಮನೆವನೆಯ ಬಾಗಿಲಿಗೆ ಹೋಗಿ, ವೇದಶಾಸ್ತ್ರಾದಿಗಳ ಸಂದೇಶವನ್ನು ಹೃದ್ಯವಾಗಿ ಬಿತ್ತರಿಸಿದರು. ಅವರ ರಚನೆಗಳಲ್ಲಿ ಒಂದು ಕಡೆ ಮಾಧ್ವಸಿದ್ಧಾಂತ ಪ್ರಮೇಯಗಳಿದ್ದರೆ, ಮತ್ತೊಂದು ಕಡೆ ಎಲ್ಲ ಮತಧರ್ಮಗಳಿಗೂ ಸಮಾನವಾದ ಸದಾಚಾರಸಂಹಿತೆಯಿದೆ. ಸಾಮಾನ್ಯರ ದೃಷ್ಟಿಯಲ್ಲಿ ಎರಡನೆಯದೇ ಮುಖ್ಯ.

ಹರಿದಾಸದರ್ಶನದ ಆಕರಗಳೆಂದರೆ, ಮಧ್ವಾಚಾರರೂ ಅವರ ಅನುಯಾಯಿಗಳೂ ವ್ಯಾಖ್ಯಾನಿಸಿದಂತೆ ವೇದೋಪನಿಷತ್ತುಗಳು, ಸ್ಮೃತಿಗಳು, ಬ್ರಹ್ಮಸೂತ್ರಗಳು, ಭಾಗವತಾದಿ ಪುರಾಣಗಳು, ರಾಮಾಯಣ ಮಹಾಭಾರತಗಳು, 'ನ್ಯಾಯಸುಧಾ'ದಂತಹ ಕೃತಿಗಳು ಮುಂತಾದುವು. ಎಷ್ಟೋ ಕಡೆ, ಇವುಗಳಿಂದ ಆಯ್ದ ಭಾಗಗಳನ್ನು ದಾಸರು ಕನ್ನಡಕ್ಕೆ ಅನುವಾದಿಸುವುದುಂಟು.

ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ತುಂಬ ಮೌಲಿಕವಾದದ್ದಾಗಿದೆ. ಅದು ಮನುಷ್ಯನ ಅಂತರಂಗದ ಅಜ್ಞಾನವನ್ನು ಕಳೆದು ಜ್ಞಾನದ ಬೆಳಕನ್ನು ತುಂಬುವ ಪ್ರಕಾಶವಾಗಿದೆ, ಅಂತರ್ ದೃಷ್ಟಿಯಿಂದ ಸರ್ವವನ್ನೂ ಯಥೋಚಿತವಾಗಿ ತಿಳಿಯುವ ಸಾಮರ್ಥ್ಯದ ಸಾಧನೆ ಅಂತಿಮ ಘಟ್ಟ. ಇದರಿಂದ ಅವನಿಗೆ ಜಗತ್ತನ್ನು ಅವಲೋಕಿಸುವ ದೃಷ್ಟಿ ಹಾಗೂ ತನ್ನ

ನಡವಳಿಕೆಯನ್ನು ಶಕ್ತಿ ಸಾಧಿತವಾಗುತ್ತದೆ. 'ವಿದ್ಯಾವಿಹೀನ ಪಶುಭಿಃ ಸಮಾನ' ವಿದ್ಯೆ ಪಡೆಯದವನು ಪಶು ಸಮಾನನೆ ಸರಿ. ದೇಹ, ಬುದ್ಧಿ, ಮನಸ್ಸು ಮೂರನ್ನೂ ಸುಶಿಕ್ಷಿತಗೊಳಿಸುವುದೇ ನಿಜವಾದ ಶಿಕ್ಷಣವಾಗಿದೆ. ಚಿತ್ತಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಆಂತರಿಕ ಕ್ಷೋಭೆಗೆ ಒಳಗಾಗದೆ ಸಾಕ್ಷಿಪ್ರಜ್ಞೆಯಿಂದ ಎಲ್ಲವನ್ನೂ ಅವಲೋಕಿಸುವ ಹಾಗೂ ಸತ್ಯದ ಬಲದಿಂದ ಹೋರಾಡಿ ಉಳಿದುಕೊಳ್ಳುವ ಶಕ್ತಿ ನಿಜವಾದ ಶಿಕ್ಷಣದ ಸಾಧನೆಯಾಗಿದೆ. ಹಾಗೆಯೇ ಜೀವನವಿಕಾಸ ಮತ್ತು ವ್ಯಕ್ತಿತ್ವವಿಕಾಸಗಳು ಶಿಕ್ಷಣದ ಪರಿಣಾಮಕಾರಿ ಶಕ್ತಿಗಳಾಗಿವೆ.

ನಮ್ಮ ರಾಷ್ಟ್ರದ ಪ್ರಗತಿಯ ಹೆಜ್ಜೆಯಲ್ಲಿ ಸಾಮಾನ್ಯ ಜನತೆಯ ಬದುಕಿನ ಮಟ್ಟವು ಮೇಲೇರಬೇಕು ಮತ್ತು ಈ ದೇಶದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಅದು ಉತ್ತಮವಾದ ಶಿಕ್ಷಣದಿಂದ ಮಾತ್ರ ಸಾಧ್ಯ. ಕೊಠಾರಿ ಶಿಕ್ಷಣ ಆಯೋಗವು ಹೇಳುವಂತೆ "The destiny of India is now being shaped in the class rooms". ಭಾರತದ ಭವಿಷ್ಯ ಶಾಲಾಹಂತದ ವರ್ಗದ ಕೋಣೆಗಳಲ್ಲಿ ನಿರ್ಣಯಿಸಲ್ಪಡುತ್ತದೆ ಎಂಬ ಮಾತುಗಳು ತುಂಬ ಅರ್ಥಪೂರ್ಣವಾದವುಗಳಾಗಿವೆ. ಭಾರತದ ಅಭಿವೃದ್ಧಿಯ ಬಗ್ಗೆ ವಿಚಾರ ಮಾಡುವಾಗ ನಮ್ಮ ರಾಷ್ಟ್ರೀಯ ಶಿಕ್ಷಣದ ಗುರಿಗಳು ಸಮಾಜವಾದಿ ತಳಹದಿಯ ಸಮಾಜ ರಚನೆಯೇ ಆಗಿರುವುದು ಗಮನಾರ್ಹ.

**ರಾಷ್ಟ್ರೀಯ ಶಿಕ್ಷಣದ ಮುಖ್ಯ ಗುರಿಗಳು**

1. ರಾಷ್ಟ್ರದ ಅಭಿವೃದ್ಧಿಯ ಹಿನ್ನೆಲೆಯಲ್ಲಿ
   i) ಆಹಾರದಲ್ಲಿ ಸ್ವಾವಲಂಬನೆ
   ii) ಆರ್ಥಿಕ ಪ್ರಗತಿ ಮತ್ತು ಎಲ್ಲರಿಗೂ ಉದ್ಯೋಗ ಅವಕಾಶಗಳು
   iii) ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯತೆ ಸೂಚಿಸುವುದು
   iv) ರಾಜಕೀಯ ಪ್ರಗತಿ
2. ಶಿಕ್ಷಣವನ್ನು ಬದಲಾವಣೆಯ ಸಾಧನವನ್ನಾಗಿ ಉಪಯೋಗಿಸುವುದು

i) ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.

ii) ಶಿಕ್ಷಣವನ್ನು ಜೀವನದ ಅವಶ್ಯಕತೆಗಳಿಗೆ ಮತ್ತು ಆಕಾಂಕ್ಷೆಗಳ ಪೂರೈಕೆಗೆ ಹೊಂದಿಸುವುದು.

iii) ವಿಜ್ಞಾನವನ್ನು ಶಿಕ್ಷಣ ಮತ್ತು ಸಂಸ್ಕೃತಿಯ ಮುಖ್ಯ ಆಧಾರವನ್ನಾಗಿಟ್ಟುಕೊಳ್ಳುವುದು.

3. ಸೆಕ್ಯೂಲರಿಸಂ – ಲೌಕಿಕವಾದ, ಎಲ್ಲ ಧರ್ಮಿಯರಿಗೂ ತಮ್ಮ ತಮ್ಮ ಧರ್ಮಾಚರಣೆ ಅನುಸರಿಸಲು ಸ್ವಾತಂತ್ರ್ಯವನ್ನು ಕಲ್ಪಿಸಿಕೊಡುವರು.
4. ಎಲ್ಲರಿಗೂ ಏಕರೀತಿಯ ನ್ಯಾಯ
5. ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು
6. ಮಕ್ಕಳಲ್ಲಿ ರಾಷ್ಟ್ರಪ್ರೇಮ ಬೆಳೆಯಿಸುವುದು.
7. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿವು ಮಾಡಿಕೊಡುವುದು.
8. ಅಂತರಾಷ್ಟ್ರೀಯ ಮನೋಭಾವ ಬೆಳೆಯಿಸುವುದು.

ಹೀಗೆ ಈ ರಾಷ್ಟ್ರೀಯ ಗುರಿಗಳ ಹೃದಯದಲ್ಲಿ ಅನೇಕ ಅಭಿವ್ಯಕ್ತಿಗಳು ಅಡಕವಾಗಿವೆ. ದೇಶದ ಸರ್ವತೋಮುಖ ಅಭಿವೃದ್ಧಿಯೆಂದರೆ, ನಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ, ಆಧ್ಯಾತ್ಮಿಕ ಬೆಳವಣಿಗೆಗಳೇ ಆಗಿವೆ. ಶಿಕ್ಷಣದ ಮೂಲಕ ನಾವು ದೇಶದ ಅಭಿವೃದ್ಧಿಯನ್ನು ಸಾಧಿಸುವ ಗುರಿಯನ್ನಿರಿಸಿಕೊಂಡಿದ್ದೇವೆ. ಈ ದಿಸೆಯಲ್ಲಿ ನಾವು ನಮ್ಮ

ಶಿಕ್ಷಣವನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಿಕೊಂಡಿದ್ದೇವೆ.

1. ಪೂರ್ವ ಪ್ರಾಥಮಿಕ ಶಿಕ್ಷಣದ ಹಂತ
2. ಪ್ರಾಥಮಿಕ ಶಿಕ್ಷಣದ ಹಂತ
3. ಮಾಧ್ಯಮಿಕ (ಪ್ರೌಢ) ಶಿಕ್ಷಣದ ಹಂತ
4. ಉಚ್ಚ ಶಿಕ್ಷಣದ ಹಂತ

ಈ ಎಲ್ಲ ಶಿಕ್ಷಣದ ಹಂತಗಳಿಗೂ ನಮ್ಮ ಶಿಕ್ಷಣದ ಗುರಿಗಳು ಬೇರೆ ಬೇರೆಯಾಗಿವೆ. ಪೂರ್ವಪ್ರಾಥಮಿಕದಲ್ಲಿ ಶಿಕ್ಷಣದ ಗುರಿ ಮಗುವಿನ ಆರೋಗ್ಯ ರಕ್ಷಣೆ ಮೂಲಭೂತ ಕೌಶಲಗಳ ನಿರ್ಮಾಣ, ಸಾಮಾಜಿಕ ಮನೋವೃತ್ತಿ, ಅಭಿವೃದ್ಧಿ ಕುತೂಹಲಗಳ ಉದ್ದೀಪನೆ, ಸೃಜನಶೀಲ ನಡವಳಿಕೆಗಳ ನಿರ್ಮಾಣ ಮಾಡುವುದಾಗಿದೆ. ಪ್ರಾಥಮಿಕ ಹಂತದಲ್ಲಿ ಕಡ್ಡಾಯದ ಉಚಿತ ಸಾರ್ವತ್ರಿಕ ಶಿಕ್ಷಣ ಎಷ್ಟು ಸಾಧ್ಯವೋ ಅಷ್ಟು ಮಗುವಿನ ಸಮೀಪ ಈ ಶಿಕ್ಷಣವನ್ನು ಒಯ್ಯುವುದಾಗಿದೆ. ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಪ್ರಾಥಮಿಕ ಶಿಕ್ಷಣ ಮಹತ್ವದ ಅಸ್ತ್ರವಾಗಿದೆ.

ಪ್ರೌಢಶಿಕ್ಷಣವು ಪ್ರತ್ಯಕ್ಷ ಶಿಕ್ಷಣದ ಮಹತ್ವದ ಘಟ್ಟ, ಮಕ್ಕಳು ಶೈಶವ, ಬಾಲ್ಯ, ಕೌಮಾರ್ಯಗಳನ್ನು ಕಳೆದು ಯೌವನಕ್ಕೆ ಕಾಲಿಡುವ ಕಾಲ ಇಲ್ಲಿ ಮಕ್ಕಳ ಬೌದ್ಧಿಕಶಕ್ತಿ ತುಂಬ ಹರಿತವಾಗಿರುವಂತಹದು ಮತ್ತು ತರ್ಕಬದ್ಧವಾಗಿ ನಿಖರವಾಗಿ ಆಲೋಚಿಸುವ ಸಾಮರ್ಥ್ಯವನ್ನು ತೋರ್ಪಡಿಸುವ ಮತ್ತು ತಿಯನ್ನು ಹೊಂದಿರುತ್ತಾರೆ. ಏಕೆ? ಹೇಗೆ? ಯಾವಾಗ? ಎಲ್ಲಿ? ಎಂಬ ಪ್ರಶ್ನೆಗಳು ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಮಕ್ಕಳ ಬೌದ್ಧಿಕ ಪ್ರತಿಭೆಯನ್ನು ಸಮ್ಮೋಹಿಸುವಂತಹ ಪಠ್ಯವಸ್ತು ಅವರಿಗೆ ಸಿಗಬೇಕಾದುದು ಕ್ರಮಪ್ರಾಪ್ತವಾಗಿದೆ. ಈ ಹಂತದ ಶಿಕ್ಷಣದ ಗುರಿಗಳು 1) ಸಾರಸ್ವತ ತರಬೇತಿ. 2) ಪೌಢ ಕರ್ತವ್ಯಗಳ ಅರಿವು 1) ಎಲ್ಲರ ಒಳಿತಿನಲ್ಲಿ ಒಳಿತು ಅಡಗಿದೆ ಎಂಬ ಅರಿವು 4) ಭಾಷೆಯ ಮೇಲೆ ಪ್ರಭುತ್ವ 1) ಲಲಿತಕಲೆಗಳಲ್ಲಿ ಆಸಕ್ತಿ 6) ಆರೋಗ್ಯ ರಕ್ಷಣೆ ಮತ್ತು ಶಾರೀರಿಕ ದಾರ್ಢ್ಯತೆಯನ್ನು ಸಂವರ್ಧಿಸಿಕೊಳ್ಳುವಿಕೆ 7) ಸ್ವಉದ್ಯೋಗದ ಕಲ್ಪನೆ ಇತ್ಯಾದಿ ಉದ್ದೇಶಗಳು ಪ್ರಮುಖವಾಗಿವೆ.

ಹೀಗೆ ಪ್ರೌಢಶಿಕ್ಷಣ ಕ್ಷೇತ್ರದ ಗುರಿಗಳು ವಿಶೇಷ ಮಹತ್ವವನ್ನು ಪಡೆದಿವೆ. ನಮ್ಮ ದೇಶಕ್ಕೆ ವಿವಿಧ ಕ್ಷೇತ್ರಗಳಿಗೆ ಬೇಕಾಗುವ ಮನುಷ್ಯಶಕ್ತಿಯನ್ನು ಒದಗಿಸುವ ಜವಾಬ್ದಾರಿಯೂ ಈ ಹಂತದಲ್ಲಿದೆ. ಅದಕ್ಕಾಗಿ ಮಾಧ್ಯಮಿಕ ಶಿಕ್ಷಣದ ಹರವು, ವಿಸ್ತಾರಗಳು ಬದಲಾಗಬೇಕು. ಸರಿಯಾದ ತರಬೇತಿ ಪಡೆದ ಮನುಷ್ಯಶಕ್ತಿ ಇಂದು ನಮ್ಮ ಅಗತ್ಯದ ಬೇಡಿಕೆಯಾಗಬೇಕು. ಅದಕ್ಕಾಗಿ ನಮ್ಮ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಬೇಕಾಗಿದೆ.

ಜೀವನದುದ್ದಕ್ಕೂ ಒಳ್ಳೆಯ ನಡತೆಯನ್ನು ರೂಪಿಸುವುದು ಮತ್ತು ಒಳ್ಳೆಯ ಪರಿಪಾಠಗಳನ್ನು ರೂಪಿಸುವುದೆಂದರೆ, ತಾರುಣ್ಯಾವಸ್ಥೆಯಲ್ಲಿಯೇ ಎಂದು ಎಲ್ಲ ಶಿಕ್ಷಣವೇತ್ತರು ಅಭಿಪ್ರಾಯಪಡುತ್ತಾರೆ. ಈ ತಾರುಣ್ಯಾವಸ್ಥೆಯು ಹನ್ನೊಂದು ವರ್ಷದಿಂದ ಹದಿನೆಂಟು ವರ್ಷದ ವಯಸ್ಸಿನವರೆಗಿನದಾಗಿದೆ. ಈ ಅವಧಿಯಲ್ಲಿಯೇ ಮಕ್ಕಳು ಪ್ರೌಢಶಿಕ್ಷಣವನ್ನು ಪಡೆಯುವವ ರಾಗಿದ್ದಾರೆ. ಇಲ್ಲಿ ಮಕ್ಕಳ ಪೂರ್ಣ ವ್ಯಕ್ತಿತ್ವವನ್ನು ಅಂದರೆ ದೈಹಿಕ, ಮಾನಸಿಕ ಮತ್ತು ಸಾಂಸ್ಕೃತಿಕ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಶಿಕ್ಷಣವನ್ನು ಪಡೆಯಬೇಕಾಗಿದೆ. ನಿಜವಾಗಿಯೂ ಪ್ರೌಢಶಿಕ್ಷಣವು ರಾಷ್ಟ್ರೀಯ ಶಿಕ್ಷಣದ ಬೆನ್ನೆಲುಬಾಗಿದೆ. ಜೀವನದ ಎಲ್ಲ ಹಂತಗಳಲ್ಲಿ ಉತ್ತಮ ವ್ಯಕ್ತಿಗಳನ್ನು, ನಾಯಕರನ್ನು ಅನುಭಾವಿ ಸಮಾಜ ಸುಧಾರಕರನ್ನು ತಯಾರಿಸುವ ಹೊಣೆ ಈ ಪ್ರೌಢ ಶಿಕ್ಷಣದ್ದಾಗಿದೆ.

ಆದರೆ ದುರ್ದೈವವಶಾತ್ ಪ್ರೌಢಶಿಕ್ಷಣವು ತನ್ನ ಮೇಲಿರುವ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಲು ವಿಶೇಷವಾಗಿ ಅವಲೋಕಿಸಿಲ್ಲ. ಅನ್ವೇಷಣೆ, ಸಂಶೋಧನೆಗಳ ಫಲವಾಗಿ ಕ್ಷಣ ಕ್ಷಣಕ್ಕೂ ಜ್ಞಾನದ ಸ್ಫೋಟ ಆಗುತ್ತಲಿದೆ. ನಮ್ಮ ಅಳತೆ ಮೀರಿ ಬೆಳೆಯುತ್ತಿದೆ. ಎಲ್ಲ ರಾಷ್ಟ್ರಗಳು ಇಂದು ವೈಜ್ಞಾನಿಕ ಬೆಳವಣಿಗೆಗೆ ಸರಿಸಮನಾಗಿ ತಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ಮಾಡಿಕೊಂಡು ಬೆಳೆಯುತ್ತಿವೆ. ಆದರೆ ನಮ್ಮ ದೇಶದ ಪ್ರೌಢಶಾಲಾಹಂತದ ಶಿಕ್ಷಣದಲ್ಲಿ ಆಮೆಗತಿಯ ಬದಲಾವಣೆಯಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ.

ಇಂದು ಪ್ರೌಢಶಾಲಾ ಹಂತದ ವಿದ್ಯೆ ಮಕ್ಕಳಲ್ಲಿ ವಿನಯವನ್ನು ತರುವಂತಹದ್ದು ಒತ್ತಟ್ಟಿಗಿರಲಿ, ಅವರಲ್ಲಿ ನೈತಿಕ ಅಧಃಪತನದ ಎಲ್ಲ ಲಕ್ಷಣಗಳನ್ನು ಕಾಣುತ್ತೇವೆ. 'ಗುಟಕಾ' ಸಂಸ್ಕೃತಿಯ ಪರ್ವಕಾಲವನ್ನು ಇಂದು ನಾವೆಲ್ಲ ಮೌನವಾಗಿ ನೋಡತ್ತಲಿದ್ದೇವೆ, ಅದರೊಂದಿಗೆ ಪಟ್ಟಣ ಪ್ರದೇಶಗಳಲ್ಲಿಯ ಮಾದಕ ವಸ್ತುಗಳ ಸೇವನೆ, ಧೂಮಪಾನ, ಮದ್ಯಸೇವನೆಯಂತಹ ಕೆಟ್ಟ ಹವ್ಯಾಸಗಳು ಪ್ರೌಢಶಾಲಾ ಹಂತಕ್ಕೆ ವರ್ಗಾವಣೆಯಾಗಿ ಭರದಿಂದ ಬರುತ್ತಲಿವೆ. ಇದು ತುಂಬ ಕಳವಳಕಾರಿಯಾದ ಸಂಗತಿಯಾಗಿದೆ. ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಪರಿಣಾಮಕಾರಿ ಯಾಗಿ ಪ್ರಭಾವ ಬೀರುವ ಸಿನೆಮಾ, ದೂರದರ್ಶನ, ಅಶ್ಲೀಲ ಸಾಹಿತ್ಯ, ಪಾಲಕರ ನಿರ್ಲಕ್ಷ, ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿರುವುದು, ಸಮರ್ಥ ಅರ್ಪಿತ ಮನೋಭಾವದ ಶಿಕ್ಷಕರ ಕೊರತೆ, ಸಾಮುದಾಯಿಕ ಸಮಾಜಜೀವನದ ಆದರ್ಶದ ಅಭಾವ, ಜಾತೀಯತೆ, ಭ್ರಷ್ಟಾಚಾರ, ಮೋಸ, ಬಡತನ, ಅಜ್ಞಾನ, ಕೊಲೆ–ಸುಲಿಗೆ, ದರೋಡೆ, ಅಪಹರಣ, ಅತ್ಯಾಚಾರಗಳಂತಹ ಪ್ರಕರಣಗಳು ಮಕ್ಕಳ ಮುಗ್ಧಮನಸ್ಸಿನ ಮೇಲೆ ಪರಿಣಾಮ ಬೀರದಿರಲು ಸಾಧ್ಯವೇ? ಇವೆಲ್ಲ ಭಾವಿ ಭವಿಷ್ಯದ ಮಕ್ಕಳನ್ನು ಇಂದು ದಾರಿತಪ್ಪಿಸುತ್ತಲಿವೆ.

ಈ ದೇಶದ ವಿದ್ವಾಂಸರು, ಶಿಕ್ಷಣತಜ್ಞರು ಈ ಸಮಸ್ಯೆಗಳ ವಿಚಾರವಾಗಿ ಎಚ್ಚರಿಕೆ ನೀಡುತ್ತಲಿದ್ದಾರಾದರೂ ಈ ಸಮಸ್ಯೆ ಇನ್ನೂ ಕಗ್ಗಂಟಾಗುತ್ತಲೇ ನಡೆದಿದೆ. ಇದಕ್ಕೆ ಪರಿಹಾರ ಕಂಡುಹಿಡಿಯದಿದ್ದರೆ ನಮ್ಮ ಶೈಕ್ಷಣಿಕ ವ್ಯವಸ್ಥೆಯೇ ಕುಸಿದು ಬೀಳುವ ಅಪಾಯ ತಪ್ಪಿದ್ದಲ್ಲ. ಇದೆಲ್ಲದಕ್ಕೂ ಮುಖ್ಯಕಾರಣ ನಮ್ಮ ಪ್ರೌಢಶಾಲಾ ಹಂತದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೈತಿಕ ಮೌಲ್ಯಗಳನ್ನು ವ್ಯವಸ್ಥಿತವಾಗಿ ಬೆಳೆಯಿಸದೇ ಇದ್ದುದೇ ಕಾರಣ. ಹೊಸ ಶಿಕ್ಷಣ ನೀತಿ ಇತ್ತೀಚೆಗೆ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಆದರೆ ಪಠ್ಯಕ್ರಮದಲ್ಲಿ ಮೌಲ್ಯಶಿಕ್ಷಣಕ್ಕೆ ಬೇಕಾದ ಹೇರಳವಾದ ಸಾಹಿತ್ಯ ಶರಣಸಾಹಿತ್ಯದಲ್ಲಿದ್ದು ಅದರ ಸದುಪಯೋಗವನ್ನು ಪಠ್ಯಕ್ರಮ ಸರಿಯಾಗಿ ಬಳಸಿಕೊಂಡಿಲ್ಲ. ಇಂದು ಎದುರಿಸುವ ಬಹುಪಾಲು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಬಸವಾದಿ ಪ್ರಮಥರ ಶರಣಸಾಹಿತ್ಯದಲ್ಲಿದೆ. ಇಂದಿನ ಪ್ರೌಢಶಾಲಾಹಂತದ ಹೊಸ ಅಭ್ಯಾಸಪತ್ರಿಕೆ (1992–1993) ಜಾರಿಯಲ್ಲಿ ಬಂದಿದೆ. ಕರ್ನಾಟಕ ರಾಜ್ಯ ಪಠ್ಯಪುಸ್ತಕ ನಿರ್ದೇಶನಾಲಯ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಹೊರತಂದ ಅಭ್ಯಾಸಪತ್ರಿಕೆಯಲ್ಲಿ 1986ರ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ 1988ರಲ್ಲಿ ಪಠ್ಯಕ್ರಮ ಪರಿಷ್ಕರಿಸಲಾಯಿತು. ಎನ್.ಸಿ.ಇ.ಆರ್.ಟಿ.ಯ ನಿರ್ದೇಶನವನ್ನು ಈ ಪಠ್ಯಕ್ರಮ ರಚನಾಕಾರರು ಅನುಸರಿಸಿರುವುದಾಗಿ ಹೇಳಿದ್ದಾರೆ. ಆದರೆ ಮಹತ್ತರವಾದ ಜೀವನದ ಮೌಲ್ಯಗಳಿಗೆ ಹತ್ತಿರವಾದ ಶರಣ ಸಾಹಿತ್ಯವನ್ನು ನೆಪಮಾತ್ರಕ್ಕೆ ಪಠ್ಯಕ್ರಮದಲ್ಲಿ ತರಲಾಗಿದೆ.

ಪ್ರೌಢಶಾಲಾಹಂತದ ಎಂಟು, ಒಂಭತ್ತು, ಹತ್ತನೆಯ ತರಗತಿಗಳಿಗೆ ಕನ್ನಡ, ಪ್ರಥಮ, ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಶರಣ ಸಾಹಿತ್ಯವನ್ನು 5, 10, 15 ಸಾಲುಗಳ ಪಠ್ಯವನ್ನು ನಿಗದಿಗೊಳಿಸಲಾಗಿದೆ. ಇದನ್ನು ಬಿಟ್ಟರೆ ಮೂರು ವರ್ಗದ ಇತಿಹಾಸ ಪಠ್ಯಕ್ರಮದಲ್ಲಿ ಒಂಬತ್ತನೆಯ ತರಗತಿಗೆ ಮಾತ್ರ ಬಸಣ್ಣನವರ ಸ್ಥೂಲವಾದ ಚರಿತ್ರೆಯನ್ನು ಹಚ್ಚಲಾಗಿದೆ. ಬೇರೆ ಭಾಷೆಯ ಪಠ್ಯದಲ್ಲಿ ಎಲ್ಲಿಯೂ ಶರಣ ಸಾಹಿತ್ಯದ ಪ್ರಸ್ತಾಪವಿಲ್ಲ.

ಪಠ್ಯಕ್ರಮಕ್ಕೆ ಅದರದೇ ಆದ ಸೀಮಿತ ಉದ್ದೇಶಗಳಿವೆ. ಆದರೂ ಯಾವುದು ಹೆಚ್ಚು ಪ್ರಸ್ತುತ ಇದೆ, ಯಾವುದರಿಂದ ಮಕ್ಕಳಲ್ಲಿ ಸುಲಭವಾಗಿ ಸಾಂಸ್ಕೃತಿಕ ನೈತಿಕ ಮೌಲ್ಯಗಳನ್ನು ಬೆಳೆಸಲು ಸಾಧ್ಯವಿದೆಯೆಂಬುದನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಮೇಲುನೋಟಕ್ಕೆ ಗೋಚರಿಸುವಂತಹ ಸಂಗತಿ, ಹರಿದಾಸ ಸಾಹಿತ್ಯ ಕೇವಲ ಬ್ರಾಹ್ಮಣರ ಒಂದು ಧರ್ಮದ ಸಾಹಿತ್ಯವಲ್ಲ. ಅದು ಇಡೀ ಮನುಕುಲಕ್ಕೆ ದಾರಿದೀಪವಾಗುವ ಎಲ್ಲ ವರ್ಗದವರ ಸಾಹಿತ್ಯವೆಂಬುದನ್ನು, ಅದನ್ನು ತಿಳಿದುಕೊಂಡವರು ಇಲ್ಲವೆ ಅಧ್ಯಯನ ಮಾಡಿದವರಿಗೆ ಮಾತ್ರ ತಿಳಿಯುವಂತಹುದು.

ಇಂದಿನ ನಮ್ಮ ರಾಷ್ಟ್ರೀಯ ಸಂವಿಧಾನದ ಶಿಕ್ಷಣದ ಗುರಿಗಳನ್ನು ಬಸವಯುಗದ ಶರಣಸಮಾಜದ ನಂತರ ಆಗಲೇ ಜಾರಿಗೆ ತಂದಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಹರಿದಾಸ ಸಾಹಿತ್ಯ ನಮ್ಮ ದೇಶದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು, ಭಾರತದಲ್ಲಿ ಇಂತಹ ಸಾಹಿತ್ಯ ಪ್ರಕಾರವೊಂದರ ಸೃಷ್ಟಿ ಅದೊಂದು ಯೋಗಾಯೋಗ, ಸಾಹಿತ್ಯದ ಮೂಲಕ ಜನಪರ ಆಂದೋಲನ ನಡೆದದ್ದು ವಿಶ್ವದ ಪ್ರಾಚೀನ ಸಾಹಿತ್ಯದ ಇತಿಹಾಸದಲ್ಲೇ ಮೊದಲನೆಯದು ಶರಣಸಾಹಿತ್ಯ, ನಂತರದ್ದು ಹರಿದಾಸ ಸಾಹಿತ್ಯ. 'ಸಾಮಾಜಿಕ ನ್ಯಾಯದ' ಸ್ಥಾಪನೆಗಾಗಿ ರಾಜಸತ್ಯ, ಮತಸತ್ಯಗಳ ವಿರುದ್ಧ ಸಮಾಜದ ವಿವಿಧ ಸ್ಥರಗಳ ಜನತೆ ಅದರಲ್ಲೂ ದೀನರೂ, ದಲಿತರು, ಮಹಿಳೆಯರು ನಡೆಸಿದ ಆಂದೋಲನವಿದು. ವಿದ್ವಾಂಸರು ಹೇಳುವ ಹಾಗೆ ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಇಲ್ಲಿ ಸ್ಫೋಟಗೊಂಡಿವೆ. ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರು, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರು, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳು ಬಾಳಿದ್ದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಇದೊಂದು ಏಕೈಕ ಉದಾಹರಣೆಯಾಗಿದೆ.

ಮಧ್ವಮತವನ್ನು ಶ್ರೀಪಾದರಾಜರು ಹೀಗೆ ಸೂತ್ರೀಕರಿಸಿದ್ದಾರೆ :

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ ।

ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚ ಭಾವಂಗತಾಃ ।

ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ ।

ಹ್ಯಕ್ಷಾದಿ ತ್ರಿತಯಂ ಪ್ರಮಾಣಮುಖಿಲಾಮ್ನಾಯಕವೇದ್ಯೋ ಹರಿಃ□

ಸಾಧು ಸಾಧಲೆ ಬಸವ ಓದು ಕಲಿಯಿತು ಜನವು

ಹೋದ ಹೋದಲ್ಲಿ ಹೊಸ ಮಾತು ಕೇಳಿದವು ಮೇದಿನಿಗೆ ಬಂತು ಹೊಸಮಾತು ಜನಪದರ ಈ ನುಡಿಗಟ್ಟು ಬಸವ ಕಾಲದ ಜನ ಓದಿ ಬರೆಯಲು ಕಲಿತುದನ್ನು ನಿರೂಪಿಸುತ್ತದೆ.

ಸಂವಿಧಾನದ 31ನೇ ವಿಧಿ ಮಹಿಳೆಗೂ, ಪುರುಷರಿಗೂ ಸಮಾನ ಸೌಲಭ್ಯ ಅವಕಾಶ ಕೊಡಬೇಕೆಂದಿದೆ. ವಿಧಿ [15] ಪುರುಷ ಹಾಗೂ ಮಹಿಳೆಯರಿಬ್ಬರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ವಿಧಿ [14, 15, 16] ವ್ಯಕ್ತಿಯ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿ ಲಿಂಗಭೇದವಿಲ್ಲದೆ ಎಲ್ಲ ನಾಗರಿಕರಿಗೂ ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ, ಕಾನೂನಿನ ಎದುರು ಎಲ್ಲರೂ ಸಮಾನರು ಎನ್ನುವ ವಿಧಿ, ಹಾಗೆಯೇ ಸಂವಿಧಾನದ ನಿಬಂಧನೆ(17) ಅಸ್ಪೃಶ್ಯತೆಯನ್ನು ತೆಗೆದುಹಾಕಿದೆ. ನಿಬಂಧನೆ [46] ದುರ್ಬಲ ವರ್ಗದವರಿಗೆ ಪಾರ್ಲಿಮೆಂಟ್ ಹಾಗೂ ರಾಜ್ಯದ ನ್ಯಾಯಾಂಗಗಳಲ್ಲಿ ವಿಶೇಷ ಪ್ರಾತಿನಿಧ್ಯತೆಗಳನ್ನು ಕೊಟ್ಟು ಸೇವೆ / ಹುದ್ದೆಗಳನ್ನು ಕಾಯ್ದಿರಿಸಿದೆ. ನಿಬಂಧನೆ 338 ದುರ್ಬಲ ವರ್ಗದವರ ಸಮಸ್ಯೆ ಇನ್ನಿತರ ವಿಷಯಗಳನ್ನು ಕುರಿತು ಅಧ್ಯಯನ ಮಾಡಲು ವಿಶೇಷ ಅಧಿಕಾರಿಯನ್ನು ನೇಮಿಸುವುದಾಗಿದೆ.

ದಾಸರು ತಮ್ಮ ಅನೇಕ ಹಾಡುಗಳನ್ನು ಈ ಸೂತ್ರಗಳಿಗೆ ಭಾಷ್ಯವನ್ನಾಗಿಸಿದ್ದಾರೆ. ಹರಿದಾಸರಲ್ಲಿ "ವೇದಾಂಥ ಗ್ರಂಥಗಳಂತೆ ಸಾಧಕ ಬಾಧಕ ಪ್ರಮಾಣಗಳನ್ನು ಸಾಲಾಗಿ ಕೊಟ್ಟು ಪ್ರಮೇಯವನ್ನು ಪ್ರತಿಷ್ಠೆಗೊಳಿಸುವ ಕ್ರಮವು ಅನುಸರಿಸಲ್ಪಟ್ಟಿಲ್ಲ. ಪ್ರಮಾಣಗಳನ್ನು ಬುಡಕಟ್ಟನ್ನಾಗಿ ಇಟ್ಟುಕೊಂಡು ಜನಸಾಮನ್ಯರ ಅನುಭವವನ್ನು ವಿವೇಚಿಸಿ ಪ್ರತ್ಯಕ್ಷ ಅನುವರಾನಗಳಿಗೆ ನಿಲುಕದ ವೇದೈಕವೇದ್ಯನಾದ ಶ್ರೀಹರಿಯ ಮಹಿಮೆಯನ್ನು ಕೊಂಡಾಡುತ್ತ ಜ್ಞಾನಿಗಳಾದ ಪ್ರಹ್ಲಾದ ನಾರದಾದಿಗಳ ವನ್ನು ಉದಾಹರಿಸಿ ಎಲ್ಲರಿಗೂ ಮನದಟ್ಟಾಗುವಂತೆ ಗುಹ್ಯ ಪ್ರಮೇಯಗಳನ್ನು ವಿವರಿಸಿದ್ದಾರೆ".[1]

ಪುರಂದರದಾಸರು ದ್ವೈತಸಿದ್ಧಾಂತವನ್ನು ಹೀಗೆ ಸಂಕ್ಷಿಪ್ತವಾಗಿ ತಿಳಿಸುತ್ತಾರೆ.

ಸತ್ಯ ಜಗಕಿದು ಪಂಚಭೇದವು ।
ಸತ್ಯ ಶ್ರೀ ಗೋವಿಂದನ ।
ಕೃತ್ಯವನಾಂತು ತಾರತಮ್ಯದಿ
ಕೃಷ್ಣನಧಿಕೆಂದು ಸಾರಿರೆ ॥

ಅಷ್ಟೆ ಅಲ್ಲ, ಹೀಗೆ ಎಚ್ಚರಿಸುತ್ತಾರೆ :

ಬಿಡಬೇಡಿ ಬಿಡಬೇಡಿ ।
ಮದ್ವಮತದ ಸಿದ್ಧಾಂತದ ಪದ್ಧತಿ ।
ಬಿಡಬೇಡಿ ಬಿಟ್ಟು ಕೆಡಬೇಡಿ ॥

ಪುರಂದರದಾಸರ ಈ ಕೀರ್ತನೆಯೂ ಗಮನಾರ್ಹ, ವೈದಿಕ ಪರಂಪರೆಯ ದೃಷ್ಟಿಯಿಂದ:

ಒಬ್ಬ ಆಚಾರಿಯನು ದೈವವೇ ಇಲ್ಲವೆಂದ
ಒಬ್ಬಾಚಾರಿಯನ್ನು ದೈವಕೆಂಟೇ ಗುಣವೆಂದ
ಒಬ್ಬಾಚಾರಿಯನು ನಿರ್ಗುಣ ನಿರಾಕಾರ
ನಿರವಯವನೆಂದಾ ಕಡೆಯಲಿ ತಾನೇ ದೈವವೆಂದಾ ।
ಒಬ್ಬರು ವೇದಾರ್ಥವರಿತು ಅರಿಯರು
ಒಬ್ಬಾ ಮಧ್ವಾಚಾರಿಯರೆ ಪುರಂದರ ವಿಠಲ–
ನೊಬ್ಬನೆ ದೈವವೆಂದು ತೋರಿಸಿಕೊಟ್ಟರಾಗಿ ॥
ವೈದಿಕ ಮತದಲ್ಲಿ ನಡೆದೇವೆಂದು ತಾವು
ವೈಷ್ಣವವಂ ಬಿಟ್ಟುಕೊಟ್ಟರು ಕೆಲವರು
ಮತದಲ್ಲಿ ನಡೆದೇವೆಂದು ತಾವು

ವೈದಿಕವಂ ಬಿಟ್ಟುಕೊಟ್ಟರು ಕೆಲವರು

ವೈದಿಕ ವೈಷ್ಣವವೊಂದೆಂದು ಮಧ್ವಮುನಿ ಪ್ರತಿಪಾದಿಸಿದ ಪುರಂದರವಿಠಲ ಮೆಚ್ಚೆ 

ಭಕ್ತಿಯ ಸ್ವರೂಪವನ್ನು ಅದರ ಸಾಧನೆಗೆ ಮಾಡಬೇಕಾದ ಉಪಾಯವನ್ನು ಪರಂದರರು ಒಂದು ಪರಿಚಿತ ರೂಪಕದ ಮೂಲಕ ವಿವರಿಸುತ್ತಾರೆ :

ಅನುಭವದಡುಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ ।ಪ॥
ತನುವೆಂಬ ಭಾಂಡವ ತೊಳೆದು, ಕೇಳುವ
ಮನದ ಚಂಚಲವೆಂಬ ವಂಸುರೆಯ ಕಳೆದು ಘನವಾಗಿ ಮನೆಯನ್ನು ಬಳಿದು, ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡ ನಡೆದು

ವಿರಕ್ತಿಯೆಂಬುವ ಮಡಿಯುಟ್ಟು, ಪೂರ್ಣ
ಹರಿಭಕ್ತಿಯೆಂಬ ನೀರನ್ನೆಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು, ಮಾಯಾ
ಮರೆಯೆಂಬ ಕಾವ್ಯವ ಮುದದಿಂದ ಸುಟ್ಟು

ಕರುಣೆಂಬ ಸಾಮಗ್ರಿ ಹೂಡಿ ಮೋಕ್ಷ
ಪರಿಕರವಾದಂಥ ಪಾಕವ ಮಾಡಿ
ಗುರುಶರಣರು ಸವಿದಾಡಿ
ನಮ್ಮ ಪುರಂದರವಿಠಲನ್ನ ಬಿಡದ ಕೊಂಡಾಡಿ

ಹರಿಸರ್ವೋತ್ತಮತ್ವವನ್ನು ಹೇಳುವ ಪುರಂದರದಾಸರ ಈ ಹಾಡು ಭಗವನ್ಮಹಿಮೆಯನ್ನು ಅಮೋಘವಾಗಿ ಸ್ಥಾಪಿಸುತ್ತದೆ:

ಸಕಲ ಗ್ರಹಬಲ ನೀನೆ ಸರಸಿಜಾಕ್ಷಾ
ನಿಖಿಳರಕ್ಷಕ ನೀನೆ ವಿಶ್ವವ್ಯಾಪಕನೆ
ಜಿತವಾಗಿ ಎನ್ನೊಡೆಯ ಪುರಂದರ ವಿಠಲನೆ ।
ಶ್ರುತಿಗೆ ನಿಲುಕದ ಅಪ್ರತಿಮಮಹಿಮ ನೀನೆ ।

ಈ ಸಂಸಾರ ಹೇಯವೆಂದೇನೂ ಹೇಳುವುದಿಲ್ಲ. ದಾಸರು. ಬದುಕಬೇಕು, ಆದರೆ ಭಗವಂತನನ್ನು ಮರೆಯದೆ' ಅಹಂಕಾರ ಮಮಕಾರಗಳನ್ನು ಬಿಟ್ಟು, ಅನಾ ಸಕ್ತಿಯಿಂದ ಬದುಕಬೇಕು ಎಂಬುದು ಅವರ ಹಿತವಚನ. ಇದು ಪುರಂದರವಾಣಿ :

ಈಸಬೇಕು ಇದ್ದು ಜೈಸಬೇಕು
ಹೇಸಿಕೆ ಸಂಸಾರದಲ್ಲಿ ಆಶಾ ಲೇಶ ಮಾಡದ್ದಾಂಗೆ
ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು ...

"ಷಟ್ಕರ್ಮ ಮಾಡಬೇಕು" ಎಂದು ಹೇಳುತ್ತಾರೆ ಪುರಂದರದಾಸರು. ಒಟ್ಟಿನಲ್ಲಿ ಅವರ ಕೀರ್ತನೆಗಳ ವಿಷಯಗಳು ಇವು : "ಸಂಸಾರಕ್ಕೆ ಬೇಕಾಗುವ ನೀತಿಯ ಉಪ ದೇಶ, ಲೋಕದ ಜನರ ಸ್ವರೂಪ ಸಾಧನೆ ಯೋಗ್ಯತೆಗನುಸರಿಸಿ ಉಪಯುಕ್ತವಾದ ಉಪಾಸನೆಯ ಕ್ರಮ. ವಿಷ್ಣು ಭಕ್ತಿಯನ್ನು ಉದ್ರೇಕಿಸುವ ತಾರತಮ್ಯ ಪಂಚಭೇದ ಜ್ಞಾನ. ಶ್ರೀಹರಿಯ ಕಾರುಣ್ಯ, ಜೀವನ ಪರಾಧೀನತೆ, ಶ್ರೀಹರಿಯ ಸಾತಂತ್ರ್ಯ, ಸಚ್ಚಿದಾನಂದಾತ್ಮನಾದ ನಾರಾಯಣನ ಅಚಿಂತ್ಯಾದ್ಭುತ ಶಕ್ತಿಯನ್ನು ಪ್ರಕಟಿಸುವ ಅವತಾರಲೀಲೆಗಳು, ಹರಿ ಸಂಕಲ್ಪದ ಅಪ್ರತಿಹತಿ, ಕರ್ಮತ್ರಯದಿಂದ–ಸಂಚಿತ, ಪ್ರಾರಬ್ಧ, ಆಗಾಮಿಗಳಿಂದ ಸಂಸಾರದ ಸಂಕೋಲೆಯಲ್ಲಿ ಸಿಕ್ಕಿ ಗತಿಗಾಣದ ಜೀವನು ಈ ಸಂಸಾರದಲ್ಲಿಯೇ ಇದ್ದು ಅವುಗಳ ಬಾಧೆಯನ್ನು ತಪ್ಪಿಸಿಕೊಳ್ಳುವ ಉಪಾಯ ವಾದ ಶ್ರೀಹರಿಯೇ ಶರಣು ಎಂಬ ಭಾವನೆ, ಅವನ ಕಾರುಣ್ಯದಿಂದ ಯಥಾ ಯೋಗ್ಯವಾಗಿ ಅಪರೋಕ್ಷ ಜ್ಞಾನವನ್ನು ಹೊಂದಿ, ಜ್ಞಾನಾನಲದಿಂದ ಸಂಚಿತಾಗಾಮಿಗಳನ್ನು ಸುಟ್ಟು ಪ್ರಾರಬ್ಧವನ್ನು ತಗ್ಗಿಸುವುದು"–

ವಾದಿರಾಜತೀರ್ಥರು ಅಷ್ಟಾದಶಪುರಾಣಗಳ ಸಾರಾಂಶವನ್ನು ತಿಳಿಯ ಪಡಿ ಸುವ ಹಲವಾರು ಪದ್ಯಗಳನ್ನು ಗದ್ಯ ಪದ್ಯ ಗ್ರಂಥಗಳನ್ನೂ ರಚಿಸಿದ್ದಾರೆ ; ಅಷ್ಟೆ ಅಲ್ಲ, ಉಪನಿಷತ್ತು, ಮಂತ್ರ, ಬ್ರಾಹ್ಮಣಗಳು, ಬ್ರಹ್ಮಸೂತ್ರಗಳು, ಪಾಂಚರಾತ್ರಾ ಗವು ಮೊದಲಾದ ಮೂಲಭೂತ ಪ್ರಮಾಣಗಳನ್ನು ತಮ್ಮ ಕೃತಿಗಳಲ್ಲಿ ಸಮಾವೇಶ ಗೊಳಿಸಿದ್ದಾರೆ. ಶಾಸ್ತ್ರಜ್ಞಾನವಿಲ್ಲದವರಿಗೆ ಇವು

ತುಂಬ ಉಪಾದೇಯವಾಗಿವೆ. ವಿಜಯದಾಸರ ಹಾಡುಗಳಲ್ಲಿ ಪರಾಪರತತ್ತ್ವ, ಹರಿವಾಯುಗಳು, ತೀರ್ಥಕ್ಷೇತ್ರಗಳು ಮುಂತಾದುವನ್ನು ಕುರಿತ ವಿಚಾರಗಳು ಅಭಿವಾನಿ ದೇವತೆಗಳ ಸ್ತೋತ್ರಗಳೂ ಕಂಡುಬರುತ್ತವೆ. ಗೋಪಾಲದಾಸರು ಭಾರತ–ಭಾಗವತ ರಾವಕಾಯಣಗಳ ಕಥೆ ಗಳನ್ನು ತಮ್ಮ ಕೃತಿಗಳಲ್ಲಿ ನಿರೂಪಿಸಿ, ಶ್ರೀಹರಿಯ ಮಹಾತ್ಮ ಮತ್ತು ಸ್ವಾತಂತ್ರಾದಿ ಗುಣಗಳನ್ನು ಸ್ತುತಿಸಿದ್ದಾರೆ: ಉಪನಿಷತ್ತುಗಳೂ ಅದರಲ್ಲಿ ಉಕ್ತವಾಗಿದೆ. ಜಗನ್ನಾಥದಾಸರ ರಚನೆಗಳಲ್ಲಿ ಶ್ರುತಿ, ಪುರಾಣ, ಇತಿಹಾಸ, ಶ್ರೀ ಮದಾಚಾರ್ಯರ 37 ಗ್ರಂಥಗಳು ಮೊದಲಾದುವುಗಳ ಹುರುಳು ಕೋಡೀಕೃತವಾಗಿದೆ.

ಒಟ್ಟಿನಲ್ಲಿ 16–17ನೆಯ ಶತಮಾನದಲ್ಲಿ ಶ್ರೀ ವ್ಯಾಸತೀರ್ಥ, ಪುರಂದರದಾಸ, ವಾದಿರಾಜತೀರ್ಥ, ಕನಕದಾಸ ಮುಂತಾದ ತತ್ವಜ್ಞಾನಿಗಳು ಜನತೆಯ ಎಲ್ಲ ಪಂಗಡದ ಜನರಿಗೆ, ಬ್ರಾಹ್ಮಣರ ಶಾಸ್ತ್ರಾಭಿಜ್ಞರೂ ಇವರಿಂದ ಆರಂಭವಾಗಿ ಶೂದ್ರರ ಶಾಸ್ತ್ರಜ್ಞಾನವಿಲ್ಲದವರ ಪರಂತ ತತ್ವಜ್ಞಾನದ ಸವಿಯೂಟವನ್ನು ಭಕ್ತಿಯ 'ದ್ರಾಕ್ಷಾಪಾಕದಿಂದ ಕೂಡಿಸಿ ಒದಗಿಸಿಕೊಟ್ಟರು 11 ಜಟಿಲ ಆಧ್ಯಾತ್ಮಿಕ ತಾತ್ವಿಕ ವಿಚಾರಗಳನ್ನು, ವೇದಾಂತ ಪ್ರಮೇಯಗಳನ್ನು ಅವರು ಜನಭಾಷೆಯಲ್ಲಿ ಅಂಗೈನಲ್ಲಿ ಮಾಡಿಕೊಟ್ಟರು.

ಹರಿದಾಸರ ಉಪದೇಶ 'ಸಾಮಾನ್ಯರ ವೇದ' ಮಾತ್ರವಲ್ಲ; 'ಅಸಾಮಾನ್ಯ'ರಿಗೂ ಅದರಿಂದ ಪ್ರಯೋಜನ ಉಂಟು. ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಕಲಿಯದವರ ಕಾಮಧೇನು' ಮಾತ್ರವಲ್ಲ, "ಕಲಿತವರ ಕಲ್ಪವೃಕ್ಷ'ವೂ ಹೌದು. ಅದರ ಗುರಿ ಎಲ್ಲರ ಏಳ್ಗೆ, ಕಲ್ಯಾಣ. ಅದಕ್ಕಾಗಿ ಶರಣರು ಮತ್ತು ದಾಸರು ಸಂಸ್ಕೃತದಲ್ಲಿದ್ದ ದೇವಗಂಗೆಯನ್ನು ಕನ್ನಡದ ನೆಲಕ್ಕೆ ಕರೆತಂದರ ; ಭಗೀರಥರಾದರು. ಅವರಿಗೆ ನಾಡು ಋಣಿ.

ಹರಿದಾಸ ಸಾಹಿತ್ಯ ಜನರಿಂದ ಜನರಿಗಾಗಿ ಜನರ ಮಧ್ಯದಲ್ಲಿ ಸೃಷ್ಟಿಗೊಂಡ ಅಪೂರ್ವ ಸಾಹಿತ್ಯ, ವ್ಯಕ್ತಿಹಿತ ಹಾಗೂ ಸಮಾಜ ಹಿತವನ್ನು ಬಯಸಿದ ಈ ಸೃಷ್ಟಿಗಳು ಇಂದು ಎಂದಿನದಕ್ಕಿಂತ ಹೆಚ್ಚು ಪ್ರಸ್ತುತವಾಗಿವೆ. ಶಿಕ್ಷಣ ಕ್ಷೇತ್ರದ ಆರೋಗ್ಯಪೂರ್ಣ ಬೆಳವಣಿಗೆಗೆ ಪ್ರಬಲ ಅಸ್ತವಾಗಿ ಹರಿದಾಸ ಸಾಹಿತ್ಯವನ್ನು ಪಠ್ಯಕ್ರಮದಲ್ಲಿ ಜಾಣೆಯಿಂದ ಆಳವಡಿಸಿಕೊಂಡು ಬೋಧನೆಯ ಮೂಲಕ ಮಕ್ಕಳಲ್ಲಿ ಮೌಲ್ಯಶಿಕ್ಷಣವನ್ನು ನೀಡಬಹುದಾಗಿದೆ. ಇಡೀ ಹರಿದಾಸ ಸಾಹಿತ್ಯವೇ ಮೌಲ್ಯಗಳಿಂದ ಕೂಡಿದ ಸಾಹಿತ್ಯವಾಗಿದೆ ಎಂಬುದನ್ನು ಪಠ್ಯಕ್ರಮರಚನಾಕಾರರು ಇನ್ನಾದರೂ ಅರಿತು ಈ ಸಾಹಿತ್ಯದ ಪ್ರಯೋಜನವನ್ನು ಪಡೆಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಎಚ್ಚೆಸ್ಕೆ (ಸಂ.), ದಾಸ ಸಾಹಿತ್ಯ ದರ್ಶನ
2. ರಾ.ಸ್ವಾ. ಪಂಚಮುಖಿ– ಕರ್ನಾಟಕ ಹರಿದಾಸ ಸಾಹಿತ್ಯ
3. ಅ.ನ.ಕೃಷ್ಣರಾಯರು – ಭಾರತೀಯ ಸಂಸ್ಕೃತಿ ದರ್ಶನ
4. ರಂ.ಶ್ರೀ. ಮುಗಳಿ– ಕನ್ನಡ ಸಾಹಿತ್ಯ ಚರಿತ್ರೆ
5. ಜಿ. ವರದರಾಜರಾವ್– ದಾಸ ಸಾಹಿತ್ಯದ ದ್ವಿತೀಯ ಘಟ್ಟದ ಸಾಧನೆ